

ಕಾನನ
ಆಗಸ್ಟ್ 2020
ನಿಸರ್ಗದೆಡೆಗೆ ಪಯಣ
WCG
Wildlife Conservation Group

# ಕಾನನ

ನಿಸರ್ಗದೆಡೆಗೆ ಪಯಣ

ಮುಖಪುಟ

ಹಸಿರು ಬಳ್ಳಿ ಹಾವು



© ವಿಜಯ್ ಕುಮಾರ್ ಡಿ. ಎಸ್.

ಆಗಸ್ಟ್ – 2020

## ಲೇಖನಗಳು


* ಬೋಟ್ಸವಾನದ ಆನೆಗಳ ಸಾವು ಒಂದು ವಿಶ್ಲೇಷಣೆ – ಶಂಕರಪ್ಪ ಕೆ. ಪಿ.

* ಮಿತಿ ಮೀರಿದ ಬಳಕೆ ದಿನ – ಸಿ. ಜಿ. ವೆಂಕಟೇಶ್ವರ

* ಹಾರುವ ಮಿಂಚು! – ಜೈಕುಮಾರ್ ಆರ್.

* ಮೋಡಗಳು (ಕವನ) – ಮಧುಸೂಧನ ಹೆಚ್. ಸಿ.

* ಪ್ರಕೃತಿ ಬಿಂಬ – ಪೃಥ್ವಿ ಬಿ.
ಧನರಾಜ್ ಎಂ.



**ವಿನ್ಯಾಸ**

ಧನರಾಜ್ ಎಂ.

**ಮುಖಪುಟ ಛಾಯಾಚಿತ್ರ**

ಶ್ರೀನಾಥ್ ಗುರುರಾಜ್

**ಪರಿಷ್ಕರಣೆ**

ಮುರಳಿ ಎಸ್.

ಅನನ್ಯರೂಪ

**ಕರಡು ತಿದ್ದುಪಡಿ**

ಡಾ.ದೀಪಕ್ ಬಿ., ಮೈಸೂರು




© ಹಯಾತ್ ಮೊಹಮ್ಮದ್

# ನವಿಲಾಡಿ ಮರ

**ಸಾಮಾನ್ಯ ಹೆಸರು : Peacock Chaste Tree**

**ವೈಜ್ಞಾನಿಕ ಹೆಸರು : *Vitex altissema***



© ನಾಗೇಶ್ ಓ. ಎಸ್. ನವಿಲಾಡಿ ಮರ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ

ನವಿಲಾಡಿ ಮರವು ಸಾಮಾನ್ಯವಾಗಿ ಎಲೆ ಉದುರುವ ಕಾಡುಗಳಲ್ಲಿ ಕಾಣಸಿಗುತ್ತದೆ. ಸುಮಾರು ಇಪ್ಪತ್ತರಿಂದ ಇಪ್ಪತ್ತೈದು ಮೀಟರ್ ಎತ್ತರಕ್ಕೆ ಬೆಳೆಯುವ ಈ ಮರ ಒರಟಾದ ಬೂದು ಬಣ್ಣದ ತೊಗಟೆಯನ್ನು ಹೊಂದಿದ್ದು, ಮರದ ಎಲೆಗಳು ತಿಳಿ ಹಸಿರು ಬಣ್ಣದಿಂದ ಕೂಡಿರುತ್ತದೆ. ಸುಮಾರು 6-18 ಸೆಂ.ಮೀ ಉದ್ದವಿರುವ ಎಲೆಯ ಕೊನೆ ಚೂಪಾಗಿರುತ್ತದೆ. ಹೂಗಳು ಗೊಂಚಲಿನಲ್ಲಿದ್ದು, ಬಿಳಿ ನೇರಳೆ ಮಿಶ್ರಿತ ಗುಲಾಬಿ ಬಣ್ಣದಿಂದ ಕೂಡಿರುತ್ತವೆ. ಈ ಮರದ ಹೂವುಗಳ ಮೊಗ್ಗು ಬಿಳಿ ಬಣ್ಣವಿದ್ದು, ಮೊಗ್ಗುಗಳ ಮೇಲೆ ಸಣ್ಣ ಸಣ್ಣ ಕೂದಲಿನಂತಹ ರಚನೆಯಿಂದ ತುಂಬಿರುತ್ತದೆ. ಹೂಗಳು ಸುವಾಸನೆ ಭರಿತವಾಗಿರುತ್ತವೆ. 6-8 ಮಿ.ಮೀ ಅಡ್ಡಳತೆಯ ನಯವಾದ ಮತ್ತು ನೇರಳೆ ಬಣ್ಣದ ಕಾಯಿಗಳನ್ನು ಬಿಡುತ್ತವೆ. ಈ ಕಾಯಿಗಳು ಹಣ್ಣಾದಾಗ ನೇರಳೆಯಿಂದ ಕಪ್ಪು ಬಣ್ಣಕ್ಕೆ ತಿರುಗುತ್ತವೆ. ಭಾರತೀಯ ಆಯುರ್ವೇದದಲ್ಲಿ ಈ ಮರದ ಭಾಗಗಳಾದ ಎಲೆ ಮತ್ತು ಬೇರುಗಳನ್ನು ಕೆಮ್ಮು, ಅಲರ್ಜಿ, ಗಾಯಗಳು ಮೊದಲಾದವುಗಳನ್ನ ಗುಣಪಡಿಸಲು ಔಷಧಕ್ಕಾಗಿ ಬಳಸುತ್ತಾರೆ.



# ಬೋಟ್ಸವಾನದ ಆನೆಗಳ ಸಾವು ಒಂದು ವಿಶ್ಲೇಷಣೆ

ಬೋಟ್ಸವಾನಾ, ಆಫ್ರಿಕಾದ ದಕ್ಷಿಣ ಭಾಗದಲ್ಲಿ ಇರುವ ಒಂದು ಚಿಕ್ಕ ದೇಶ. ಇಲ್ಲಿನ ಆಕರ್ಷಣೆಯೇ ಆನೆ. ಇಲ್ಲಿರುವ ವಿಶಾಲ ಹುಲ್ಲುಗಾವಲು, ಸುಮಾರು ಒಂದು ಲಕ್ಷದ ಮೂವತ್ತು ಸಾವಿರ ಆನೆಗಳ ಆಶ್ರಯತಾಣವಾಗಿದೆ. ಇಲ್ಲಿನ ಜನರ ಮುಖ್ಯ ಕಸುಬು ಹೈನುಗಾರಿಕೆ ಮತ್ತು ವ್ಯವಸಾಯ. ಪ್ರತೀ ವರ್ಷವೂ ಸತತವಾಗಿ ಕಾಡುತ್ತಿರುವ ಬರದಿಂದ ಇಲ್ಲಿನ ಜನ ಜಾನುವಾರುಗಳ ಮತ್ತು ಕಾಡುಪ್ರಾಣಿಗಳ ನಡುವೆ ಆಹಾರಕ್ಕಾಗಿ, ನೀರಿಗಾಗಿ ಹೋರಟ ಸಂಘರ್ಷ ಇದ್ದದ್ದೇ.

ಬೊಟ್ಸವಾನದ ವನ್ಯಜೀವಿಗಳ ಜೀವವೈವಿಧ್ಯವನ್ನು ನೋಡಲು, ವಿಶ್ವದ ಮೂಲೆ ಮೂಲೆಗಳಿಂದ ಪ್ರವಾಸಿಗರು ಬಂದು ಸಫಾರಿ ಮಾಡುತ್ತಾರೆ. ಪ್ರವಾಸೋದ್ಯಮ ಅಲ್ಲಿನ ಜನರಿಗೆ ಕೆಲಸ ಮತ್ತು ಸರ್ಕಾರಕ್ಕೆ ಉತ್ತಮ ಆದಾಯವನ್ನೂ ತಂದುಕೊಡುತ್ತಿದೆ. ಈ ದೇಶದ ಸುಮಾರು ಶೇಕಡಾ 40ರಷ್ಟು ಭೂಭಾಗವನ್ನು ವನ್ಯಜೀವಿಗಳಿಗಾಗಿಯೇ ಮೀಸಲಿಟ್ಟಿದ್ದಾರೆ.



ಈ ಕೊರೋನಾ ಕಾಲದಲ್ಲಿ ವೈರಸ್ಸುಗಳಿಂದ ಜೀವಿಗಳ ಮೇಲೆ ಉಂಟಾಗುವ ಮಾರಣಾಂತಿಕ ಕಾಯಿಲೆಗಳ ಬಗ್ಗೆ ನಿಮಗೆ ಗೊತ್ತು. ಬೋಟ್ಸವಾನಾದ ಒಂದೇ ಪ್ರದೇಶದಲ್ಲಿ ಮುನ್ನೂರೈವತ್ತು ಆನೆಗಳು ಮಕಾಡೆಮಲಗಿ ನೆಲಕ್ಕೊರಗಿ ಸತ್ತಿವೆ. ಇಷ್ಟೊಂದು ಆನೆಗಳು ಏಕೆ ಸತ್ತುಬಿದ್ದವು ಎಂಬುದೇ ಈಗ ಯಕ್ಷ ಪ್ರಶ್ನೆ. ಯಾವುದಾದರೂ ಕಾಯಿಲೇನಾ? ವೈರಸ್ಸಾ? ಉಪವಾಸ ಬಿದ್ದು ಸತ್ತವೇ? ಅಥವಾ



ಯಾರಾದರು ವಿಷವಿಕ್ಕಿ ಕೊಂದರೇ? ನಿಖರವಾದ ಕಾರಣ ಕಾಣುತ್ತಿಲ್ಲ. ಒಟ್ಟಿನಲ್ಲಿ ಇದೊಂದು ದುರಂತ! ಇದು ಆನೆ ದಂತಚೋರರ ಕಳ್ಳ ಕೆಲಸವೆ ಎನ್ನೋಣ ಅಂದರೆ ದಂತಗಳು ಕಳುವಾಗಿಲ್ಲ! ಈ ಆನೆಗಳು ಆಂತ್ರಾಕ್ಸ್ ರೋಗದಿಂದ ಸತ್ತಿಲ್ಲ ಎಂದು ಇಲ್ಲಿನ ಅರಣ್ಯಾಧಿಕಾರಿಗಳು, ವೈದ್ಯರು ತಿಳಿಸಿದ್ದಾರೆ. ಚಿಕ್ಕ ಆನೆ- ದೊಡ್ಡಾನೆ ಎನ್ನದೆ ಎಲ್ಲಾ ವಯಸ್ಸಿನ ಆನೆಗಳೂ, ಕೆರೆ ಕುಂಟೆಗಳ ನೀರಿನ ಬಳಿ ಎಲ್ಲೆಂದರಲ್ಲಿ ಸತ್ತು ಬಿದ್ದಿವೆ. ಸಾಯೋ ಮುಂಚೆ ವೃತ್ತಾಕಾರವಾಗಿ ನಡೆದು-ನಡೆದು, ಸುತ್ತಿ-ಸುತ್ತಿ ಹಠಾತ್ತನೆ ಕುಸಿದು ಸತ್ತು ಬಿದ್ದಿರುವುದನ್ನು ನೋಡಿದರೆ ಇದು ಯಾವುದೋ ಭೀಕರ ಹುಚ್ಚು ರೋಗವೇ ಇರಬೇಕು ಎಂದು ವೈದ್ಯರು ಸಂಶಯ ಪಟ್ಟಿದ್ದಾರೆ.



ಇಲ್ಲಿನ ಅರಣ್ಯ ಇಲಾಖೆಯ ಸಿಬ್ಬಂದಿ ಸತ್ತ ಆನೆಗಳನ್ನು ಲೆಕ್ಕ ಮಾಡಲು ಆನೆಗಳ ಕಳೇಬರದ ಮೇಲೆ ಪೈಂಟ್ ನಿಂದ ನಂಬರು ಬರೆಯುತ್ತಿದ್ದಾರೆ. ಕಾರಣವೇನೆಂದರೆ ಒಂದೇ ಪ್ರದೇಶದಲ್ಲಿ ಸತ್ತು ಬಿದ್ದಿರುವ ನೂರಾರು ಆನೆಗಳನ್ನು ಲೆಕ್ಕಮಾಡುವಾಗ ಗೊಂದಲವಾಗದಿರಲಿ ಎಂದು. ಅಷ್ಟು ಭಯಂಕರವಾಗಿದೆ ಇಲ್ಲಿನ ಸ್ಥಿತಿ! ಯಾರಾದರೂ ಈ ಆನೆಗಳಿಗೆ ಸೈನೈಡ್ ಇಟ್ಟಿದ್ದರೇ? ಅಕಸ್ಮಾತ್ ವಿಷವಿಟ್ಟಿದ್ದರೆ ಅವು ಒಂದೇ ಜಾಗದಲ್ಲಿ ಮಾತ್ರ ಸಾಯಬೇಕಿತ್ತು. ಆದರೆ ಹಾಗೆ ಆಗಿಲ್ಲ. ಆನೆಗಳನ್ನು ಬಿಟ್ಟು ಉಳಿದ ಪ್ರಾಣಿಗಳು ಸತ್ತಿಲ್ಲ. ಬರಪೀಡಿತ ಬೋಟ್ಸವಾನಾ ಪ್ರದೇಶದಲ್ಲಿ ಜೀವಿಗಳು ರೋಗಗಳಿಗೆ ತುತ್ತಾಗುತ್ತಿವೆ, ಆದರೆ ಇದೊಂದು ವನ್ಯಜೀವಿ ಸಂರಕ್ಷಣಾ ದುರಂತ!



ಈ ದೇಶದಲ್ಲಿ ಹಿಂದೆ ಕಾಡು ಪ್ರಾಣಿಗಳ ಸಂಖ್ಯೆ ಹೆಚ್ಚಾದಾಗ, ಕೆಲವು ಸಲ ಇಲ್ಲಿನ ಸರ್ಕಾರ ಕೆಲ ಖಾಸಗಿ ವನ್ಯಧಾಮಗಳಿಗೆ ಆನೆ, ಸಿಂಹ ಮತ್ತು ಇತರೆ ಪ್ರಾಣಿಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ಕೊಲ್ಲಲು ಲೈಸನ್ಸ್ ಕೊಟ್ಟ ನಿದರ್ಶನಗಳು ಇವೆ. ತಮ್ಮಿಷ್ಟಕ್ಕೆ ತಾವು ಸ್ವತಂತ್ರವಾಗಿ ಸುತ್ತಾಡಿ ಬೆಳೆಯುತ್ತಿದ್ದ ಮಾನವನ ಉಗಮದ ತೊಟ್ಟಿಲಾದ ಆಫ್ರಿಕಾದ ನೆಲದಲ್ಲಿ ಇಂದು ವನ್ಯಜೀವಿಗಳಿಗೆ ಬಂದೊದಗುತ್ತಿರುವ ಗಂಡಾಂತರವನ್ನು ಕಂಡರೆ, ಮನದಲ್ಲಿ ಮರುಕವೂ ಕೋಪವೂ ಒಟ್ಟಿಗೆ ಬರುತ್ತದೆ.

ಮಾನವನ ದುರಾಸೆಯ ಜೊತೆಗೆ ರಾಜಕೀಯವೂ ಬೆರೆತರೆ ಏನಾಗುತ್ತದೆ ಎನ್ನುವುದಕ್ಕೆ ಈ ದುರಂತ ಒಂದು ಸ್ಪಷ್ಟ ಉದಾಹರಣೆ. ಬರದಿಂದ ಕಂಗೆಟ್ಟ ಆನೆಗಳು ಅಲ್ಲಿನ ಜನರು ವಾಸಿಸುವ ಪ್ರದೇಶಕ್ಕೆ ಗುಂಪು ಗುಂಪಾಗಿ ನುಗ್ಗಿದವು. ಈ ಕಾಡಾನೆಗಳಿಗೆ ಏನಾದರೂ ಮಾಡಿ ಎಂದು ಜನರು ಜನನಾಯಕರಲ್ಲಿ ಕೇಳಿಕೊಂಡರು. ಸರ್ಕಾರ ಸರ್ವಪಕ್ಷಗಳ ಸಭೆ ಕರೆಯಿತು. ಅಲ್ಲಿ ನೆರೆದವರಲೊಬ್ಬ, "ನಮ್ಮ ನೆರೆ ದೇಶದವರು ಅಲ್ಲಿನ ಆನೆಗಳನ್ನ ಕೊಲ್ಲುತ್ತಿದ್ದಾರೆ. ಅದಕ್ಕೆ ಅಲ್ಲಿನ ಆನೆಗಳೆಲ್ಲಾ ಇಲ್ಲಿಗೆ ವಲಸೆ ಬರುತ್ತಿವೆ. ಇಲ್ಲಿ ಅವುಗಳಿಗೆ ಸುರಕ್ಷೆ ಎಂದು. ಅದಕ್ಕೆ ನಾವೂ ಕೂಡ ಕೆಲವು ಆನೆಗಳನ್ನು ಕೊಲ್ಲಲು ಅನುಮತಿ ಕೊಡೋಣ" ಎಂದ.



"ಇಲ್ಲಾ ಇಲ್ಲಾ ಹಾಗೇನಾದರೂ ಮಾಡಿದರೆ ಕಳ್ಳ ಬೇಟೆಗೆ ದಾರಿಯಾಗುತ್ತೆ." ಎಂದು ವಾದಿಸಿತು ಮತ್ತೊಂದು ಪಕ್ಷ. "ಇಲ್ಲಿನ ಆನೆಗಳನ್ನು ಕೊಲ್ಲೋದಾದ್ರೆ, ಸ್ಥಳೀಯರಿಗೂ ಕೊಲ್ಲುವ ಈ ವ್ಯವಹಾರದಲ್ಲಿ ಭಾಗವಹಿಸಿ ಲಾಭಗಳಿಸಲು ಅವಕಾಶ ಕೊಡಬೇಕು" ಎಂದು ವಾದಿಸಿತು ಇನ್ನೊಂದು ಪಕ್ಷ.

"ಆನೆಗಳನ್ನು ಬೇಟೆಯಾಡಲು ಅನುಮತಿ ಕೊಡೋದಾದ್ರೇ, ಕೆಲವು ಸಿಂಹಗಳನ್ನೂ ಬೇಟೆಯಾಡಲು ಅನುಮತಿ ಕೊಡಿ, ಏಕೆಂದರೆ ಈ ಸಿಂಹಗಳು ಜನರ ಜಾನುವಾರುಗಳನ್ನು ಬೇಟೆಯಾಡಿ ನುಂಗಿ ನೀರು ಕುಡಿಯುತ್ತಿವೆ" ಎಂದು ವಿರೋಧ ಪಕ್ಷದವರು ವಾದಿಸಿದರು.



ಸರ್ಕಾರ ಈಗ ಅಡ್ಡಕತ್ತರಿಯಲ್ಲಿ ಸಿಕ್ಕಿಕೊಂಡು, ಯಾವುದೇ ನಿರ್ಧಾರ ಕೈಗೊಳ್ಳದೆ ಏನು ಮಾಡುವುದು ಎಂದು ಕೈ ಕೈ ಹಿಸುಕಿಕೊಳ್ಳುತ್ತಿರುವ ಸಮಯದಲ್ಲಿ ಈ ದುರಂತ ಸಂಭವಿಸಿದೆ. ಸತ್ತ ಆನೆಗಳ ಅಂಗಾಂಗದ ಕೆಲವು ಸ್ಯಾಂಪಲ್ಲುಗಳನ್ನು ವಿಶ್ವದ ಎಲ್ಲಾ ಪ್ರತಿಷ್ಠಿತ ಲ್ಯಾಬ್ ಗಳಿಗೆ ಕಳುಹಿಸಿ ಕೊಡಲಾಗಿದೆ. ಲ್ಯಾಬ್ ವರದಿ ಬರಲು ಒಂದು ವಾರ ಅಥವಾ ಒಂದು ತಿಂಗಳು ಆಗಬಹುದು. ಜನ ಆ ಸತ್ತ ಆನೆಗಳನ್ನು ಮರೆಯಬಹುದು. ಆದರೆ ಆ ಬದುಕುಳಿದ ಆನೆಗಳು ಮರೆಯಲಾರವು. ಏಕೆಂದರೆ ಆನೆ ಅದ್ಭುತ ನೆನೆಪಿನ ಶಕ್ತಿ ಹೊಂದಿರುವ ಅತ್ಯಂತ ಸುಂದರ ಸಂವೇದನಶೀಲ ಪ್ರಾಣಿ.

**ಚಿತ್ರಗಳು:** Livescience.com


**ಲೇಖನ:** ಶಂಕರಪ್ಪ ಕೆ.ಪಿ.
ಡಬ್ಲ್ಯೂ. ಸಿ. ಜಿ., ಬೆಂಗಳೂರು





# ಮಿತಿ ಮೀರಿದ ಬಳಕೆ ದಿನ

ಏನೆಂದು ನಾ ಹೇಳಲಿ... ಮಾನವನಾಸೆಗೆ ಕೊನೆ ಎಲ್ಲಿ.... ಎಂಬ ಅಣ್ಣಾವ್ರ(ಡಾ. ರಾಜ್ ಕುಮಾರ್) ಹಾಡು ಇಂದಿಗೂ ಎಂದಿಗೂ ಪ್ರಸ್ತುತ. ಆಸೆಯೇ ದುಃಖದ ಮೂಲ ಎಂದು ಬುದ್ಧನಾದಿಯಾಗಿ ಹಲವು ಮಹಾಶಯರು ಪ್ರತಿಪಾದಿಸಿದರೂ ನಾವಿರುವುದೇ ಹೀಗೆ ಎಂಬ ಧೋರಣೆಯನ್ನು ಮುಂದುವರೆಸಿಕೊಂಡು ಬಂದ ಪರಿಣಾಮ ನಾವು ಈಗಾಗಲೇ ವೈಯಕ್ತಿಕವಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಇದರ ಪರಿಣಾಮವಾಗಿ ನಮ್ಮ ಸಾಮಾಜಿಕ, ಆರ್ಥಿಕ, ಆರೋಗ್ಯದ ಮೇಲೆ ಹಲವಾರು ದುಷ್ಪರಿಣಾಮಗಳನ್ನು ಅನುಭವಿಸುತ್ತಿದ್ದೇವೆ.

ಇದು ಇಲ್ಲಿಗೇ ನಿಂತಿಲ್ಲ ನಾವು ಮಾಡಿರುವ ಅವಾಂತರಗಳಿಂದ ಪರಿಸರ ಮತ್ತು ಜಗದ ಮೇಲೆ ಬೀರಿರುವ ಪರಿಣಾಮ ನೆನೆದರೆ ಹಗಲಿನಲ್ಲಿಯೂ ಬೆಚ್ಚಿ ಬೀಳುವಂತಾಗುತ್ತದೆ. ಹಸಿರು ಮನೆ ಪರಿಣಾಮ, ಎಲ್ ನಿನೊ ಲಾ ನಿನೊ, ಜಾಗತಿಕ ತಾಪಮಾನ, ಓಜೋನ್ ಪದರದ ಹಾನಿಯಾಗಿರುವುದು ಒಂದೇ ಎರಡೆ... ಪಟ್ಟಿ ಮಾಡುತ್ತಾ ಹೋದರೆ ಹನುಮಂತನ ಬಾಲದಂತೆ ಬೆಳೆದೀತು. ಇವೆಲ್ಲವುಗಳ ಪರಿಣಾಮವಾಗಿ ಋತುವಿನಲ್ಲಿ ಅದಲು ಬದಲು, ಅಧಿಕ ತಾಪಮಾನ, ದಿನಕ್ಕೊಂದು ಹೊಸ ರೋಗದ ಸೇರ್ಪಡೆ, ಅನ್ನಾಹಾರಕ್ಕೆ ಹಾಹಾಕಾರ, ಪ್ರಾಣಿ ಮಾನವ ಸಂಘರ್ಷ, ಪರಿಸರ ಮಾಲಿನ್ಯದಂತಹ ಅಪಸವ್ಯಯಗಳು ಮಾಮೂಲಾಗಿಬಿಟ್ಟಿವೆ. ಇದರ ಬಗ್ಗೆ ಸಾಮಾನ್ಯ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂಬ ಉದ್ದೇಶದಿಂದ ಮಿತಿ ಮೀರಿದ ಬಳಕೆ ದಿನ (Earth overshoot day) ಎಂಬ ದಿನವನ್ನು ಆಚರಿಸಲಾಗುತ್ತದೆ.




**ಹಾಗಾದರೆ ಮಿತಿಮೀರಿದ ಬಳಕೆ ದಿನ ಎಂದರೇನು?**

ಜಗತ್ತಿನ ಎಲ್ಲಾ ಜನರು ಬಳಸಲು ಯೋಗ್ಯವಾದ ನೈಸರ್ಗಿಕ ಸಂಪನ್ಮೂಲಗಳಾದ ಜಲ, ವಾಯು ಮುಂತಾದವುಗಳನ್ನು ನಾವು ಮಿತಿ ಮೀರಿ ಬಳಸಿದ್ದೇವೆ. ಹೇಗೆಂದರೆ ಈ 2020 ವರ್ಷದಲ್ಲಿ ನಾವು ಬಳಸಬೇಕಿದ್ದ ಸಂಪನ್ಮೂಲಗಳನ್ನು ಇದೇ ಜುಲೈ ತಿಂಗಳಿನಲ್ಲೇ ಮುಗಿಸುವುದಿತ್ತು. ಆದರೆ ಕೊರೋನಾ (COVID-19) ಎಂಬ ಸಾಂಕ್ರಾಮಿಕ ರೋಗದ ಪರಿಣಾಮ ಹಲವಾರು ಕೆಲಸಗಳು, ಮಾನವನ ಚಟುವಟಿಕೆಗಳು ಸ್ಥಗಿತಗೊಂಡು, ಅದು ಮೂರು ವಾರ ಮುಂದೂಡಲ್ಪಟ್ಟಿದೆ. ಅಂದರೆ ಈ 2020 ರ ಮಿತಿಮೀರಿದ ಬಳಕೆ ದಿನವು ಆಗಸ್ಟ್ 22 ಕ್ಕೆ ಮುಂದೂಡಿದೆ. ಇದರ ನೆನಪಿಗೆ ಮತ್ತು ಮುಂದೆ ನಮ್ಮ ಜೀವನದ ದುಃಸ್ಥಿತಿ ನೆನೆದು ಎಚ್ಚರಿಕೆಯಿಂದ ಮಿತಿ ಮೀರಿದ ಬಳಕೆ ದಿನ(Earth over shoot day ) ಆಚರಣೆ ಮಾಡುತ್ತಿದ್ದೇವೆ.

1970 ರಿಂದ ನಾವು ಇಂತಹ ಮಿತಿಮೀರಿದ ಸಂಪನ್ಮೂಲಗಳ ಬಳಕೆಯನ್ನು ಅಳತೆ ಮಾಡಲಾರಂಭಿಸಿದೆವು. ಇದನ್ನು ಅಳತೆ ಮಾಡಲು ಒಂದು ಸೂತ್ರವನ್ನು ಉಪಯೋಗಿಸಲಾಗುತ್ತಿದೆ. ಆ ಸೂತ್ರ ಯಾವುದೆಂದರೆ ಆ ವರ್ಷದಲ್ಲಿ ಮರುಕಳಿಸಿದ ನೈಸರ್ಗಿಕ ಸಂಪನ್ಮೂಲಗಳನ್ನು ಅದೇ ವರ್ಷ ಮಾನವನು ಬಳಸಿದ ನೈಸರ್ಗಿಕ ಸಂಪನ್ಮೂಲಗಳಿಂದ ಭಾಗಿಸಿ, 365 ರಿಂದ ಗುಣಿಸುವುದಾಗಿದೆ. 1970 ರ ವರ್ಷ ಒಂದು ದಿನ ಮೊದಲೇ ನಾವು ನಮ್ಮ ಸಂಪನ್ಮೂಲಗಳನ್ನು ಬಳಕೆ ಮಾಡಿದರೆ 1976 ರಲ್ಲಿ ನವಂಬರ್ ನಲ್ಲಿ ನಮ್ಮ ವರ್ಷದ ಸಂಪನ್ಮೂಲಗಳನ್ನು ಬರಿದು ಮಾಡಿದೆವು. 1990 ರಲ್ಲಿ ಸೆಪ್ಟೆಂಬರ್ ಮೂವತ್ತಕ್ಕೆ ನಮ್ಮ ಸಂಪನ್ಮೂಲಗಳನ್ನು ದೋಚಿದೆವು, 2018 ರಲ್ಲಿ ಆಗಸ್ಟ್ ಮೂರಕ್ಕೆ ನಮ್ಮ ಸಂಪನ್ಮೂಲಗಳನ್ನು ಮುಗಿಸಿದೆವು. ಈ ವರ್ಷ ಕೊರೋನೊ ಕಾರಣ ಆಗಸ್ಟ್ 22 ಕ್ಕೆ ಮಿತಿ ಮೀರಿದ ಬಳಕೆ ದಿನ ಆಚರಣೆ ಮಾಡುವ ದುಃಸ್ಥಿತಿ ಬಂದೊದಗಿದೆ.

ನಾವು ಹೀಗೆ ಪ್ರಾಕೃತಿಕ ಸಂಪನ್ಮೂಲಗಳನ್ನು ಮಿತಿ ಮೀರಿ ಬಳಕೆ ಮಾಡಿದರೆ ಮುಂದಿನ ವರ್ಷಗಳಲ್ಲಿ ಎರಡು ಮೂರು ತಿಂಗಳಲ್ಲಿ ನಮ್ಮ ಸಂಪನ್ಮೂಲಗಳನ್ನು ಮುಗಿಸಿ ಮುಂದಿನ ಪೀಳಿಗೆಯ ಸಂಪನ್ಮೂಲಗಳನ್ನು ಬರಿದು ಮಾಡುವ ಬಕಾಸುರರಾಗುವುದರಲ್ಲಿ ಸಂದೇಹವಿಲ್ಲ.

ಈಗಲೂ ಕಾಲ ಮಿಂಚಿಲ್ಲ. ನಮ್ಮಂತೆ ಇತರೆ ಪ್ರಾಣಿ ಪಕ್ಷಿ ಗಳಿಗೂ ಜೀವಿಸಲು ಅವಕಾಶ ನೀಡಬೇಕು. ಬದುಕಿ, ಬದುಕಲು ಬಿಡು ಎಂಬ ನಿಯಮ ಪಾಲಿಸಬೇಕು. ನಾವು ವಿವೇಚನೆಯಿಂದ ನಮಗೆ ಲಭ್ಯವಿರುವ ಸಂಪನ್ಮೂಲಗಳನ್ನು ಬಳಕೆ ಮಾಡಿ ಸುಸ್ಥಿರ ಅಭಿವೃದ್ಧಿ ಮಾಡುವ ಅಗತ್ಯವಿದೆ. ಇಲ್ಲವಾದರೆ ನಮ್ಮ ಭಯಾನಕ ಅಂತ್ಯಕ್ಕೆ ನಾವೇ ಮುನ್ನುಡಿ ಬರೆದಂತಾಗುತ್ತದೆ. ಯೋಚಿಸಿ, ಯೋಜಿಸಿ ಜೀವಿಸೋಣ. ಮಹಾತ್ಮ ಗಾಂಧೀಜಿಯವರು ಹೇಳಿದಂತೆ "ಪ್ರಕೃತಿ ಇರುವುದು ನಮ್ಮ ಆಸೆ ಈಡೇರಿಸಲು ಮಾತ್ರ, ಆದರೆ ದುರಾಸೆಯನ್ನಲ್ಲ" ಎಂಬುದನ್ನು ಪದೇ ಪದೇ ನೆನಪಿಸಿಕೊಂಡು ಪ್ರತೀ ಜೀವಿಗಳ ಜೊತೆ ಸಹಬಾಳ್ವೆಯಿಂದ ಜೀವಿಸುವುದನ್ನು ಕಲಿಯೋಣ.




**ಲೇಖನ:** ಸಿ.ಜಿ. ವೆಂಕಟೇಶ್ವರ
ತುಮಕೂರು ಜಿಲ್ಲೆ




ವಿವಿ ಅಂಕಣ

# ಹಾರುವ ಮಿಂಚು!

'ಬಲ್ಲವನೇ ಬಲ್ಲ ನಿದ್ದೆಯ ರುಚಿಯಾ' ಎಂಬ ಗಾದೆ ಕೇಳಿರುವಿರಿ...

ಇಲ್ಲವೇ? ಓಹೋ... ಸರಿ ಬಿಡಿ, 'ಬಲ್ಲವನೇ ಬಲ್ಲ ಬೆಲ್ಲದ ರುಚಿಯಾ' ಎಂಬ ಗಾದೆಯನ್ನು ಈಗಿನ ಕಾಲಕ್ಕೆ ತಕ್ಕಂತೆ, ನಿದ್ದೆಯನ್ನು ಸಿಹಿ-ಬೆಲ್ಲಕ್ಕೆ ಹೋಲಿಸಿ ಗಾದೆಯನ್ನು ಬದಲಾಯಿಸಿ ಹಾಗೆ ಹೇಳಿದೆ. ಮನೆಯ ತೊಂದರೆಗಳೋ, ಊಟವೋ, ಹೊರಗಿನ ತಲೆನೋವುಗಳೋ... ಹೀಗೆ ಹತ್ತು ಹಲವು ಕಾರಣಗಳಿಂದ ನಿದ್ದೆ ಎಂಬ ಚಿನ್ನ ಕೈಗೆ ಎಟುಕದ ಅಟ್ಟಕ್ಕೆ ಏರಿ, ಗೇಲಿ ಮಾಡುತ್ತಿರುವಂತಹ ಅನುಭವ ಹಲವರಿಗೆ ಆಗಿರಬಹುದು. ಇದೇ ಅಂಕಣದಲ್ಲಿ ಈ ಹಿಂದೆ ಯಾವಾಗಲೋ ಚರ್ಚಿಸಿರುವ ಹಾಗೆ, ಒಳ್ಳೆ ನಿದ್ದೆ ಇಲ್ಲದ ರಾತ್ರಿಯ ಕಳೆದರೆ, ಬೆಳಿಗ್ಗೆ ಹೇಗೆ ತಾನೆ ಫ್ರೆಶ್ ಆಗಿ ಇರುತ್ತದೆ ಹೇಳಿ? ಮುಂದಿನ ದಿನವೆಲ್ಲಾ ಹಾಗೆ ಸಾಗಿ, ಸವಾಲಾಗಿ, ಸಿಲ್ಲಿ ವಿಷಯಗಳೆಲ್ಲಾ ಸಂಕಷ್ಟಗಳಾಗುವ ಅಪಾಯ ಇದ್ದೇ ಇದೆ. ನಮ್ಮ ಚಿಕ್ಕಂದಿನ ವಯಸ್ಸಿನಲ್ಲಿ ಆಟವಾಡಿ ಬಂದ ತಕ್ಷಣ, ಊಟಮಾಡಿಸಿ ಅಮ್ಮ 'ಮಲಗು ಚಿನ್ನಾ (ಸೋ...ನಾ - ಸೋನಾ)' ಎನ್ನುವ ತಕ್ಷಣವೇ ನಿದ್ದೆ ಬರುವ ಹಾಗೆ ಈಗ ಏಕೆ ಬಾರದು? ನಾವು ಬೆಳೆದಂತೆ ನಿದ್ದೆ ಕಳೆಯುವುದೇ? ಆ ನಿದ್ದೆ ಈಗ ಬರಲು ಸಾಧ್ಯ ಇಲ್ಲವೇ?

ಏಕೆ ಬಾರದು, ಖಂಡಿತ ಬರುತ್ತದೆ. ನನಗೆ ತಿಳಿದ ಹಾಗೆ ಇದಕ್ಕೆ ಕೇವಲ ಎರಡು ವಿಷಯಗಳನ್ನು ನೆನಪಿನಲ್ಲಿಡಬೇಕು ಅಷ್ಟೇ... ಅವೆಂದರೆ, ನಾವು ಮಾಡುವ ಊಟ ಮತ್ತು ವ್ಯಾಯಾಮ-ಧ್ಯಾನ. ಪ್ರತಿದಿನ ಇವೆರೆಡನ್ನು

ಸರಿಯಾದ ಸಮಯಕ್ಕೆ, ಸರಿಯಾದ ರೀತಿಯಲ್ಲಿ ಮಾಡಿಬಿಟ್ಟರೆ ಸಾಕು ಒಳ್ಳೆ ನಿದ್ದೆಗೆ ಆದರೂ ಸ್ವಲ್ಪ ಕಷ್ಟ ಎನ್ನುವವರಿಗೆ ಒಂದು ಸಣ್ಣ ಉಪಾಯ... ಇದನ್ನು ಟ್ರೈ ಮಾಡಿ ನೋಡಿ. ಮಲಗುವ ಸಮಯಕ್ಕೆ ಹಾಸಿಗೆಯ ಮೇಲೆ ಆರಾಮವಾಗಿ ಮಲಗಿ ವಿಶ್ರಮಿಸಿ. ಕಣ್ಣು ಮುಚ್ಚಿ, ನಿಮಗೆ ತುಂಬ ಇಷ್ಟವಾದ ಜಾಗಕ್ಕೆ ಹೋಗಿರುವಿರಿ ಎಂದುಕೊಳ್ಳಿ. ಅಲ್ಲಿ ನಿಮ್ಮ ಮನಸ್ಸಿಗೆ ಇಷ್ಟವಾಗುವ ಸಂದರ್ಭವನ್ನು ಊಹಿಸಿಕೊಳ್ಳಿ. ಉದಾಹರಣೆಗೆ...

"ಕಣ್ಣು ಮುಚ್ಚಿ! ನಿಧಾನವಾಗಿ ಉಸಿರಾಡುತ್ತಾ... ನಿಧಾನವಾಗಿ ನಡೆದು ಹೋದಂತೆ... ತಾಜಾ ತಂಗಾಳಿ ನಿಮ್ಮ ಕೂದಲನ್ನು ನೇವರಿಸಿ ಹೋಗುತ್ತದೆ... ರಾತ್ರಿ ರಾಣಿಯ ಕಂಪು ಮೂಗಿನ ಒಳಗೆ ಸೇರುತ್ತಲೇ ನಿಮ್ಮ ಕೆನ್ನೆಯನ್ನು ಕೆಂಪಗಿನ ಸೇಬಿನ ಹಾಗೆ ಮಾಡುತ್ತದೆ. ಈಗತಾನೆ ಮಳೆ ಬಂದು ನಿಂತಿರುವುದರಿಂದ, ಮಣ್ಣಿನ ಆ ಘಮ ಗಾಢವಾಗೇ ತೋರುತ್ತದೆ, ಕ್ಷಣಾರ್ಧದಲ್ಲೇ ಮನದಲ್ಲಿ ಏನೋ ಅರಿಯದ ಸಂತೋಷ. ಚಿಕ್ಕಂದಿನ ಆ ಮಳೆಯಲ್ಲಿನ ಆಟ-ಮಣ್ಣಿನೊಂದಿಗಿನ ಗುದ್ದಾಟದ ಮೆಲುಕು ಹಾಕಿಸುತ್ತದೆ. ಅಲ್ಲೊಮ್ಮೆ ಇಲ್ಲೊಮ್ಮೆ ಜೋರಾಗಿ ಬೀಸುವ ಗಾಳಿ ಮರದ ರೆಂಬೆಗಳ ಜೊತೆ ಹಸ್ತಲಾಘವ ಮಾಡಿ, ಎಲೆಗಳ ಮೇಲಿನ ನೀರಿನ ಮುತ್ತುಗಳನ್ನು ನಿಮ್ಮ ಕೆನ್ನೆಗೆ ಗುರಿಯಿಟ್ಟು ಹೊಡೆದಂತೆ ಭಾಸವಾಗುತ್ತದೆ. ಮಂದಹಾಸ ಮುಖವನ್ನೆಲ್ಲಾ ಆವರಿಸಿ ಅಲೆದಾಡುತ್ತದೆ-ನಲಿದಾಡುತ್ತದೆ.


ಇದನ್ನೆಲ್ಲಾ ಒಮ್ಮೆ ಕಣ್ಣಿನಿಂದ ಸವಿದುಬಿಡೋಣವೆಂದು ಮನಸ್ಸು ಹೇಳಿದರೂ, ರಾತ್ರಿಯ ವೇಳೆ ಮಹಾ ಎಂದರೆ ಏನು ನೋಡಬಹುದು? ಬರೀ ಕತ್ತಲು! ಎಂದು ಇನ್ನೊಂದು ಯೋಚನೆ. ಆಗಿದ್ದಾಗಲಿ... ಅದೇನಿದೆ ನೋಡಿಯೇಬಿಡೋಣ, ಏಕೆಂದರೆ 'you never know!' ನನಗಾಗಿಯೇ ಅಚ್ಚರಿಯೊಂದು ಕಾದಿರಬಹುದು! ಎಂದುಕೊಂಡು ಕಣ್ಣು ತೆರೆದು ನೋಡುತ್ತಿದ್ದಂತೆಯೇ... ಮಳೆ ಮೋಡಗಳ ಮಧ್ಯೆ ಅವಿತು ನೋಡುತ್ತಿರುವ ಚಂದ್ರನ ಅರ್ಧ ಚಹರೆ ಸ್ಪಷ್ಟವಾಗಿ ಕಾಣುತ್ತದೆ. ಅವನು ಬೀರಿದ ಆ ಮಂದಹಾಸವೇ ಮಂದಬೆಳಕಾಗಿ ಸುತ್ತಲಿನ ಕಾಡೆಲ್ಲಾ ಆವರಿಸಿದೆ. ಅದನ್ನು ಕಣ್ಣಿನಿಂದ ನೀನು ಮಾತ್ರ ಸವಿಯಲು ಸಾಧ್ಯ. ಆ ಬೆಳಕಿನಲ್ಲಿ ಕಂಡೂ ಕಾಣದಂತ ನೀಳ, ನೇರ ನಿಂತ ಮರಗಳ ನೋಡುವ ಅನುಭವವೇ ಬೇರೆ. ಆ ದೃಶ್ಯವ ಮನಸಾರೆ ಅನುಭವಿಸುತ್ತಾ, ನಿಧಾನವಾಗಿ ಕಣ್ಣ ರೆಪ್ಪೆಯ ಬಡಿದು ತೆರೆದೊಡನೆ...

...ಹಳದಿ ಮಿಶ್ರಿತ ಹಸಿರು ಬಣ್ಣದ ನಕ್ಷತ್ರಗಳು ಕಪ್ಪು ಕಡಲಿನಂತಿರುವ ಕಾಡಿನ ಕಲ್ಪತರುಗಳ ಮಧ್ಯೆ ಹಾರಾಡುತ್ತಿರುವ ದೃಶ್ಯ. ಮಳೆಯ ಮಧ್ಯದಲ್ಲಿ ಮೂಡುವ ಮಿಂಚು ಬಂದು ಇಲ್ಲಿ ಹಾರಾಡುತ್ತಿದೆಯೇನೋ ಅನಿಸುತ್ತದೆ. ಇದನ್ನೆಲ್ಲಾ ಮೈ ಮರೆತು ನೋಡುವುದನು ಬಿಟ್ಟು ಬೇರೇನು ಕೆಲಸ ನಮಗೆ ಅಲ್ಲವೇ? ಹಾಗೆಂದು ಅದನ್ನು ವರ್ಣಿಸಿದಷ್ಟೂ ಕಡಿಮೆಯೇ...ಆ ಮಿಂಚು ಹುಳುಗಳು ಅಲ್ಲೊಮ್ಮೆ-ಇಲ್ಲೊಮ್ಮೆ ಮಿನುಗುತ್ತಾ ಇರುವಾಗ ನನ್ನ ಕಣ್ಣಿನ ರೆಪ್ಪೆಯ ಬಡಿತಕ್ಕೆ ಹೋಲುತ್ತಿದ್ದರೆ... ಒಮ್ಮೆಗೇ ಮಿನುಗಿದಾಗ ಗೂಡಿನ ಒಳಗಿರುವ ಹೃದಯ ಹೊರಗೆ ಬಂದು

ಮಿಡಿಯುತ್ತಿದೆಯೇನೋ ಎಂಬ ಭಾವ ಮೂಡಿಸುತ್ತದೆ! ಪಂಚ ಇಂದ್ರಿಯಗಳಿಗೆ ಇಷ್ಟೆಲ್ಲಾ ಅನುಭವವಾದ ಬಳಿಕ ಒಳಗಿನ ಅರಿಯದ ಆರನೆ ಶಕ್ತಿ ದೇಹವೆಲ್ಲಾ ಆವರಿಸಿ ನೃತ್ಯದ ಮೂಲಕ ಹೊರಬಂದು ಕುಣಿಯುತ್ತದೆ. ಮನ ಹಗುರವಾಗುವಷ್ಟು ಕುಣಿದು ಕುಪ್ಪಳಿಸಿ ವಿಶ್ರಮಿಸುವಾಗ...

...ಸಣ್ಣ ಮಧುರ ದನಿಯೊಂದು ನಿಮ್ಮನ್ನು ಬೆಳಗಾಯಿತು ಎಂದು ಏಳಿಸುತ್ತದೆ! ಕನಸಿನ ಅದೇ ಸಂತಸ ದಿನವೆಲ್ಲಾ ಆವರಿಸಿ ಪ್ರಪಂಚವನ್ನೇ ವರ್ಣಮಯವಾಗಿಸಿಬಿಡುತ್ತದೆ."

ಅಬ್ಬಾ ವಿ ವಿ ಅಂಕಣದಲ್ಲಿ ಇಂದು ಒಳ್ಳೆ ನಿದ್ದೆಯ ಅನುಭವ ದೊರೆಯಿತು ಎಂದು ಮಲಗಿಬಿಟ್ಟೀರಿ... ಸ್ವಲ್ಪ ಈ ಮಾಸದ ಹೊಸ ವಿಷಯದ ಕಡೆ ದೃಷ್ಟಿ ಹರಿಸೋಣ. ಅದೆಲ್ಲಾ ಸರಿ ನಾನು ಈ ಮೇಲೆ ಹೇಳಿದ ಸಂದರ್ಭದಲ್ಲಿ *'ಹಳದಿ ಮಿಶ್ರಿತ ಹಸಿರು ಬಣ್ಣದ ನಕ್ಷತ್ರಗಳು'* ಎಂದು ಹೇಳಿದೆನಲ್ಲಾ ಅದು ಏನೆಂದು ಪ್ರಶ್ನೆ ಬರಲಿಲ್ಲವೇ? ಹಾ... ನೀವು ಊಹಿಸಿದ್ದು ಸರಿ. ಅದು ಮಿಂಚು ಹುಳು. ರಾತ್ರಿಯ ಆ ಕತ್ತಲಲ್ಲಿ ಅವು ಮಿನುಗುವ ದೃಶ್ಯ ಸವಿಯುವ ಅನುಭವವೇ ಬೇರೆ. ಅದು ಬಿಡಿ ಮಲಗುವಾಗ ಊಹಿಸಿಕೊಂಡರೆ ಆಯ್ತು. ವಿಷಯಕ್ಕೆ ಬಂದರೆ  ನಿಮ್ಮ ಮುಂದಿನ ಪ್ರಶ್ನೆ ನನಗೇ ತಿಳಿಯಿತು ಬಿಡಿ. ಮಿಂಚು ಹುಳು ಹೇಗೆ ಮತ್ತು ಏಕೆ ಮಿನುಗುತ್ತದೆ? ಎಂದಲ್ಲವೇ? ಅದನ್ನೇ ಹೇಳಲು ಬಂದೆ...



ಎಲ್ಲ ತರಹದ ಬಣ್ಣಗಳನ್ನು ಹೊರಸೂಸುವ ಎಲ್. ಇ. ಡಿ. ಬಲ್ಬ್ ಗಳು ಈಗ ಮಾರುಕಟ್ಟೆಯಲ್ಲಿ ಸಾಕಷ್ಟಿವೆ. ವಿದ್ಯುತ್ತಿನ ಸಹಾಯದಿಂದ ಅವು ಬೆಳಗುತ್ತವೆ. ಕೆಲವು ನಗರವಾಸಿ ಮಕ್ಕಳಿಗೆ ಅದೇ ಅಚ್ಚರಿಯಂತೆಯೂ ಕಾಣಬಹುದು. ಆದರೆ ಮಿಂಚು ಹುಳುಗಳು ಅಂತಹ ಬೆಳಕನ್ನು ತಾವೇ ತಯಾರಿಸುತ್ತವೆ ಎಂದರೆ ನಂಬಲು ಸ್ವಲ್ಪ ಕಷ್ಟವೂ ಆದೀತು. ಆದರೆ ಅದೇ ಸತ್ಯ. ಅದು ಹೇಗೆ ಎಂದು ಸ್ವಲ್ಪ ಹೇಳಿಬಿಟ್ಟರೆ ಒಳ್ಳೆಯದು. ಇದೋ ಹೇಳಿಬಿಡುತ್ತೇನೆ... ಮಿಂಚು ಹುಳಗಳ ಒಳಗಿಂದ ಬೆಳಕು ಬರಲು ಕಾರಣ ಅಲ್ಲಾಗುವ ರಾಸಾಯನಿಕ ಕ್ರಿಯೆ. ಹಾಗಾದರೆ ಯಾವ ಯಾವ ವಸ್ತುಗಳ ನಡುವೆ ರಾಸಾಯನಿಕ ಕ್ರಿಯೆ ನಡೆಯುತ್ತದೆ? ಮಿಂಚು ಹುಳುಗಳಲ್ಲಿ *ಲೂಸಿಫರೇಸ್(luciferase)*ಎಂಬ ಪ್ರೋಟೀನ್ ಉತ್ಪತ್ತಿಯಾಗುತ್ತದೆ. ಈ ಪ್ರೋಟೀನ್ ನ *ಲೂಸಿಫೆರಿನ್(luciferin)* ಎಂಬ ಪಿಗ್ಮೆಂಟ್ ಜೊತೆಗೆ *ಆಮ್ಲಜನಕ(oxygen)* ಸೇರಿ ಬೆಳಕು ಉತ್ಪತ್ತಿಯಾಗುತ್ತದೆ.

ಹೀಗೆ ಬೆಳಕು ಹೊರಸೂಸುವ ಜೀವಿ ಇದೊಂದೇ ಅಲ್ಲ. ಕೆಲವು ಸಮುದ್ರದ ತೀರಗಳಲ್ಲಿ ರಾತ್ರಿ ಹೊಳೆಯುವ ಅಲೆಗಳನ್ನು ನೋಡಿರಬಹುದು ಅಥವಾ ಕೇಳಿರಬಹುದು. ಹೀಗೆ ಸಮುದ್ರದಲ್ಲೇ ಇನ್ನು ಹಲವಾರು ಜೀವಿಗಳು ಸ್ವಂತ


ಬೆಳಕನ್ನು ಉತ್ಪಾದಿಸುತ್ತವೆ. ಅವುಗಳನ್ನು ಮುಂದೆ ಹೇಳುತ್ತೇನೆ. ಆದರೆ ಮಿಂಚು ಹುಳುಗಳು ಇವೆಲ್ಲಕ್ಕಿಂತ ವಿಶೇಷ. ಏಕೆಂದರೆ ಬೇರೆಲ್ಲಾ ಜೀವಿಗಳು ಬೆಳಕನ್ನು ಹೊರ ಹಾಕುವಾಗ ಬೆಳಕು ನಿರಂತರವಾಗಿ ಬರುತ್ತದೆ. ಆದರೆ ಮಿಂಚು ಹುಳುಗಳು ಮಿನುಗುತ್ತವೆ, ಅಂದರೆ ಬಲ್ಬ್ ನ ಹಾಗೆ ON ಮತ್ತು OFF ಆಗುತ್ತಿರುತ್ತದೆ. ಓಹ್.... ಹಾಗಾದರೆ ಅದಕ್ಕೆ ಕಾರಣವೇನು? ಎಂದು ತಾವು ತಲೆ ಕೆಡಿಸಿಕೊಳ್ಳುವ ಹಾಗಿಲ್ಲ. ಏಕೆಂದರೆ ಇತ್ತೀಚೆಗೆ ವಿಜ್ಞಾನಿಗಳು ಅದನ್ನೂ ಕಂಡು ಹಿಡಿದಿದ್ದಾರೆ. ಮಿಂಚು ಹುಳುಗಳು ಬೆಳಕನ್ನು ತಯಾರಿಸುವಾಗ *ನೈಟ್ರೋಜನ್ ಆಕ್ಸೈಡ್(nitrogen oxide)* ಇರುವುದು ಗಮನಿಸಿದ್ದಾರೆ. ಇದೇ ಮಿಂಚುಹುಳುಗಳಲ್ಲಿ ON ಮತ್ತು OFF ಮಾಡುವ ಸ್ವಿಚ್ ಆಗಿ ಕೆಲಸ ಮಾಡುವುದಂತೆ ಅಷ್ಟೇ ಅಲ್ಲ, ಈ *ಲೂಸಿಫರೇಸ್(luciferase)*ಎಂಬ ಪ್ರೋಟೀನ್ ಉತ್ಪತ್ತಿಯಾಗಲು ಕಾರಣವಾದ ಡಿ. ಎನ್. ಎ ಅನ್ನು ಕೂಡಾ ಗುರುತಿಸಿದ್ದಾರೆ. ಇದರಿಂದ ವೈದ್ಯಕೀಯ ಸಂಶೋಧನೆಗೆ ಬಹಳ ಉಪಯೋಗವಾಗಬಹುದಂತೆ. ಅದು ಹೇಗೆ? ಎಂಬುದಲ್ಲವೇ ನಿಮ್ಮ ಪ್ರಶ್ನೆ. ಹೇಳುತ್ತೇನೆ, ಗುರುತಿಸಿದ ಪ್ರೋಟೀನ್ ಉತ್ಪತ್ತಿಯಾಗಲು ಕಾರಣವಾದ ಡಿ. ಎನ್. ಎ ಯನ್ನು ತೆಗೆದು ಬೇರೆ ಜೀವಿಗಳು ಅಥವಾ ಮನುಷ್ಯರಿಗೇ ಕೊಡುವ ಹಾಗಾದರೆ, ಕ್ಯಾನ್ಸರ್ ಇರುವ ಜೀವಕೋಶಗಳಿಗೆ ಈ ಡಿ. ಎನ್. ಎ ಹಾಕಿಬಿಟ್ಟರೆ ಆಯ್ತು. ಕ್ಯಾನ್ಸರ್ ಜೀವಕೋಶಗಳೆಲ್ಲಾ ಹೊಳೆಯುತ್ತವೆ. ಆಗ ವೈದ್ಯರ ಚಿಕಿತ್ಸೆ ಎಷ್ಟರ ಮಟ್ಟಿಗೆ ಫಲಕಾರಿಯಾಗುತ್ತಿದೆ ಎಂಬುದು ಬರೀ ಕಣ್ಣಿಗೆ ಕಾಣುತ್ತದೆ. ಆ ಆಲೋಚನೆಯೇ ಎಷ್ಟು ಚೆನ್ನಾಗಿದೆ ಅಲ್ಲವೇ?


© JEREMY_HOGAN_ISTOCK_GETTY IMAGES

ಸರಿ ಮಿಂಚು ಹುಳುಗಳಲ್ಲಿ ಬೆಳಕು ಹೇಗೆ ಬರುತ್ತದೆಂದು ತಿಳಿಯಿತು. ಹಾಗೆ ಬೆಳಕು ಬಿಡಲು ಕಾರಣವಾದರೂ ಏನು? ಅಲ್ಲಿಗೇ ಬಂದೆ... ಮಿಂಚು ಹುಳುಗಳು ಹೀಗೆ ಬೆಳಕು ಹೊರಸೂಸಲು ಮುಖ್ಯವಾಗಿ ಎರಡು ಕಾರಣಗಳು. ಒಂದು ತನ್ನ ಸಂಗಾತಿಯನ್ನು ಆಕರ್ಷಿಸಲು ಮತ್ತೊಂದು ಆಹಾರವನ್ನು ತನ್ನ ಬಳಿಗೆ ಆಕರ್ಷಿಸಲು. ಹೀಗೆ ಸ್ವಂತ

ಬೆಳಕು ಬಿಡುವ ಒಂದೊಂದು ಜೀವಿಗೂ ತನ್ನದೇ ಆದ ಕಾರಣಗಳಿವೆ. ಕೆಲವೆಂದರೆ, ಸಮುದ್ರದಲ್ಲಿ ಇರುವ ಒಂದು ಬಗೆಯ ಜೀವಿ ಹೀಗೆ ಬೆಳಕು ಬೀರುವ ಸಿಂಬಳವನ್ನು ತನ್ನನ್ನು ತಿನ್ನಲು ಬರುವ ಜೀವಿಗೆ ಅಂಟಿಸಿಬಿಡುತ್ತದೆ. ಈ ಸಿಂಬಳ ಕೆಲವು ದಿನಗಳ ಕಾಲ ಬೆಳಕು ಬೀರುತ್ತಲೇ ಇರುವುದರಿಂದ ಆ ಪರಭಕ್ಷಕ ಸಮೀಪದಲ್ಲೇ ಎಲ್ಲಾದರೂ ಸುಳಿದಾಡುತ್ತಿದ್ದರೆ ಆ ಹುಳಕ್ಕೆ ದೂರದಿಂದಲೇ ಸುಳಿವು ಸಿಗುತ್ತದೆ. ಇದರಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ಬಲು ಸಹಾಯವಾಗುತ್ತದೆ. ಇದೇನು ಮಹಾ... ನಾನು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹೋಗಲು ಈ ಬೆಳಕನ್ನು ಬಳಸುತ್ತೇನೆ ಎನ್ನುತ್ತವೆ ಒಂದು ಬಗೆಯ ಬ್ಯಾಕ್ಟೀರಿಯಾ. ಅದು ಹೇಗೆಂದರೆ, ಈ ಹೊಳೆಯುವ ಬ್ಯಾಕ್ಟೀರಿಯಾಗಳನ್ನು ಯಾವುದಾದರೂ ಪ್ರಾಣಿ ಬೆಳಗುವುದನ್ನು ನೋಡಿ ತಿನ್ನುತ್ತದೆ. ಸ್ವಲ್ಪ ದೂರ ಸಾಗಿದ ನಂತರ ಅದು ಆಹಾರವಲ್ಲ ಎಂದು ತಿಳಿದ ಬಳಿಕ ಹೊರ ಹಾಕುತ್ತದೆ. ಇವುಗಳೋ ಸೂಕ್ಷ್ಮಜೀವಿಗಳಾದ್ದರಿಂದ ಯವುದೇ ದೈಹಿಕ ವ್ಯಾಯಾಮ-ತೊಂದರೆಗಳಿಲ್ಲದೆ ಚಲಿಸಿದ ಹಾಗಾಗುತ್ತದೆ. ಅಲ್ಲವೇ?

ಸರಿಯಾಗಿ ಲಿಫ್ಟ್ ಸಹ ಕೇಳಲು ಬಾರದ ನನಗೆ ಈ ಬ್ಯಾಕ್ಟೀರಿಯಾವನ್ನು ನೋಡಿದರೆ, ಅರೇ... ಪರವಾಗಿಲ್ವೇ! ಅನ್ನಿಸುತ್ತದೆ. ಹಾಗೆ... ತಲೆಯಲ್ಲಿ ಒಂದು ಪ್ರಶ್ನೆಯೂ ಮೂಡುತ್ತದೆ. ಬುದ್ಧಿ ಜೀವಿಗಳೆಂದು ಹೇಳಿಕೊಂಡು ನಾವು ಮನಬಂದಂತೆ ನಡೆದುಕೊಂಡು, ತಿಮಿರಿನಿಂದ ತಿರುಗಾಡುತ್ತೇವಲ್ಲಾ ಇದು ಎಷ್ಟು ಸರಿ? ನಾವು ಇಂತಹ ಉದಾಹರಣೆಗಳನ್ನು ನೋಡಿಯಾದರೂ ಕೆಲವು ವಿಷಯಗಳನ್ನು ಅರಿತುಕೊಳ್ಳಬೇಕಿದೆ ಅಲ್ಲವೇ.. ಏನೇ ಆದರೂ ನಮಗೆ ತಿಳಿದದ್ದನ್ನು ಮಾತ್ರ ಆಧಾರವಾಗಿಟ್ಟುಕೊಂಡು ಏನನ್ನೂ ಆತುರದಲ್ಲಿ ನಿರ್ಧರಿಸಬಾರದು. ಪ್ರಕೃತಿಯ ಈ ದೊಡ್ಡ ರಂಗಮಂದಿರದಲ್ಲಿನ ಪಾತ್ರಧಾರಿಗಳಾದ ನಾವು ನಮ್ಮ ಪಾತ್ರಗಳ ಮಿತಿಯನ್ನು ಅರಿತು ಜೀವಿಸೋಣ!




ಲೇಖನ: ಜೈಕುಮಾರ್ ಆರ್.
ಡಬ್ಲ್ಯೂ. ಸಿ. ಜಿ., ಬೆಂಗಳೂರು



# ಮೋಡಗಳು

ಆಗಸವೇ ನಿನ್ನ ಬೊಗಸೆಯಲ್ಲಿ ಸೊಗಸಾಗಿ ಹಾಡಿವೆ ಮೋಡಗಳು
ತಾಮಸವಿಲ್ಲದೆ ತಮ್ಮಲ್ಲೇ ಗುನುಗುತ್ತಿವೆ ತನ್ಮಯದಿ ಹಾಡುಗಳು
ಜಿಟಿಜಿಟಿ ಜಿನುಗುತ್ತಿವೆ ಹನಿ ಹನಿಯಾಗಿ ಮುತ್ತು ರತ್ನಗಳು
ಸರಿಸಾಟಿಯೇ ಇಲ್ಲ ಹೊಗಳಲು ಉಪಮೇಯ ಉಪಮಾನಗಳು


ವಸಂತ ಋತುವಿಗೆ ನೀವು ಸ್ವಂತ ಮಕ್ಕಳೇ ಇರಬಹುದು
ಹಸಿರು ಸೂಸುವ ಸಸ್ಯಕುಲದ ಆಂತರ್ಯವೇ ಇರಬಹುದು
ನಿರಂತರವಾಗಿ ಪೃಥ್ವಿಯ ಮೇಲೆ ಅದೆಂತಹಾ ನಂಟು ಇರಬಹುದು
ಸತತವಾಗಿ ಸದಾಕಾಲ ಸಾಗುತ್ತಿರುವ ನಿಮಗೆಂದು ಸ್ವಾತಂತ್ರ್ಯ ದೊರಕಬಹುದು

ತಂಪಾದ ತಂಗಾಳಿಯಲ್ಲಿ ಇಳೆಗೆ ಮಳೆಯಾಗಿ ಬರುವೆ
ಭೂಮಿಯ ಮೂಲೆ ಮುಡುಕನ್ನು ಸಾಗಿ ಕೊಳೆಯನ್ನು ತೊಳೆವೆ
ಸೊರಗುತ್ತಿರುವ ರೈತನ ಮುಖದಲ್ಲೊಂದು ಕಳೆಯನ್ನು ತರುವೆ
ಬರದಿಂದ ಕೊರಗುತ್ತಿರುವ ಜೀವ ಸಂಕುಲಕ್ಕೆ ಉಸಿರೇ ಆಗಿರುವೆ

- ಮಧುಸೂಧನ ಹೆಚ್. ಸಿ.
ತುಮಕೂರು ಜಿಲ್ಲೆ

© ಧನರಾಜ್ ಎಂ.

# ಪ್ರಕೃತಿ ಬಿಂಬ




ನೇರಳೆ ಬೆನ್ನಿನ ಸೂರಕ್ಕಿ © ಪೃಥ್ವಿ ಬಿ.

ಹೂವಿನ ಮಕರಂದನ್ನು ಆಹಾರವನ್ನಾಗಿಸಿರುವ ಬೆರಳೆಣಿಕೆ ಪ್ರಭೇದದ ಪಕ್ಷಿಗಳಲ್ಲಿ ಸೂರಕ್ಕಿಯೂ ಕೂಡ ಒಂದು. ವರ್ಷದುದ್ದಕ್ಕೂ ಸಂತಾನೋತ್ಪತ್ತಿ ಮಾಡುವ ಸೂರಕ್ಕಿಗಳು ತಮ್ಮ ಗೂಡುಗಳನ್ನು ಸಸ್ಯದ ನಾರು, ಜೇಡದ ಬಲೆ, ಕಲ್ಲು ಹೂ, ಮರದ ತೊಗಟೆ ಮತ್ತು ಇತರ ವಸ್ತುಗಳಿಂದ ತುಂಬಾ ಮೃದುವಾಗಿ ಪೊದೆಗಳಲ್ಲಿ ಕೆಲವೊಮ್ಮೆ ಕಟ್ಟಡ ಹಾಗು ಬಂಡೆಗಳ ಅಡಿಯಲ್ಲಿಯೂ ಕಟ್ಟಿ ಕೊಳ್ಳುತ್ತವೆ. ಹೆಣ್ಣು ಮೊಟ್ಟೆಯಿಡುವ ಮುನ್ನ ಎರಡರಿಂದ ಮೂರು ದಿನಗಳ ಕಾಲ ಗೂಡಲ್ಲಿ ವಾಸವಿದ್ದು ಮರಿಗಳು ಅದರಲ್ಲಿ ಬೆಳೆಯಲು ಯೋಗ್ಯವಿದೆಯೇ ಎಂದು ಪರೀಕ್ಷಿಸುತ್ತವೆ. ಎರಡು ಮೊಟ್ಟೆಗಳನ್ನಿಟ್ಟು ಗಂಡು ಮತ್ತು ಹೆಣ್ಣು ಎರಡೂ ಕೂಡ 14-17 ದಿನಗಳ ಕಾಲ ಕಾವುಕೊಡುತ್ತವೆ. ಮೊಟ್ಟೆಯಿಂದ ಹೊರಬರುವ ಮರಿಗಳು ಕೇವಲ ಹೂವಿನ ಮಕರಂದದಿಂದಲೇ ಬೆಳೆಯುವುದು ಕಷ್ಟವಾಗಿರುವುದರಿಂದ ಮರಿಗಳು ಗೂಡಿಂದ ಹೊರ ಹೋಗುವವರೆಗೂ ಕೀಟಗಳನ್ನು ಆಹಾರವನ್ನಾಗಿ ನೀಡುತ್ತವೆ. ಕೆಲವೊಮ್ಮೆ ಹಳೆಯ ಗೂಡನ್ನೇ ಮರುಬಳಕೆ ಮಾಡಲಾಗುತ್ತದೆ. ಇವುಗಳ ಕೊಕ್ಕಿಗೆ ಸವಾಲೊಡ್ಡುವಂತಹ ಹೂ ಕಂಡುಬಂದಲ್ಲಿ ಹೆಚ್ಚು ತೊಂದರೆ ತೆಗೆದುಕೊಳ್ಳದೆ ಆ ಹೂವಿನ ಬುಡದಲ್ಲಿ ರಂಧ್ರ ಮಾಡಿ ಮಕರಂದವನ್ನು ದೋಚುತ್ತವೆ. ನೇರಳೆ ಬೆನ್ನಿನ ಸೂರಕ್ಕಿಯ ತಲೆ, ಹೊಳೆಯುವ ನೀಲಿ ಮಿಶ್ರಿತ ಹಸಿರು ಬಣ್ಣದಿಂದ ಕೂಡಿರುತ್ತದೆ. ಹೆಣ್ಣು ಹಕ್ಕಿಗೆ ಕಂದು ಬಣ್ಣವಿರುತ್ತದೆ.



**ನೀಲಿ ಬಾಲದ ಕಳ್ಳಿ ಪೀರ** © ಪೃಥ್ವಿ ಬಿ.

ನೀಲಿ ಬಾಲದ ಕಳ್ಳಿ ಪೀರ ಎಂದು ಕರೆಯಲ್ಪಡುವ ಈ ಪಕ್ಷಿಯು ಮೆರೋಪಿಡೆ ಕುಟುಂಬಕ್ಕೆ ಸೇರುತ್ತದೆ. ಹಲವಾರು ಪ್ರದೇಶಗಳಲ್ಲಿ ಪುಕ್ಕ ಹಾಗು ಬಣ್ಣದ ವ್ಯತ್ಯಾಸಗಳಿಂದ ಕಾಣುವುದರಿಂದ ಇತರ ಉಪಜಾತಿಗಳನ್ನು ವಿಂಗಡಿಸಲಾಗುತ್ತದೆ. ಮುಖ್ಯವಾಗಿ ಕೀಟಗಳನ್ನು ತಿನ್ನುವುದರಿಂದ ಹುಲ್ಲುಗಾವಲು, ತೆಳುವಾದ ಪೊದೆಗಳು ಮತ್ತು ಕಾಡಿನಲ್ಲಿ ಕಂಡುಬರುತ್ತವೆ. ಇವುಗಳ ಬೇಟೆಯ ವರ್ತನೆಯು ನೋಡಲು ಸೊಗಸಾಗಿರುತ್ತದೆ. ಹಿಡಿದ ಜೇನುನೊಣವನ್ನು ಹಾರುತ್ತಲೇ ತಿನ್ನದೆ ಒಂದು ಒಣ ಕಡ್ಡಿ ಅಥವಾ ವಿದ್ಯುತ್ ತಂತಿಯ ಮೇಲೆ ಕುಳಿತು ಆ ನೊಣವನ್ನು ಕಡ್ಡಿಗೆ ಉಜ್ಜುವ ಮೂಲಕ ಅದರ ಗುಟುಕನ್ನು ತೆಗೆದು ನಂತರ ತಿನ್ನುತ್ತವೆ. ಇವುಗಳನ್ನು ಸಾಮಾನ್ಯವಾಗಿ ಸಣ್ಣ ಸಣ್ಣ ಗುಂಪುಗಳಲ್ಲಿ ಕಾಣಬಹುದು, ಗುಂಪಿನಲ್ಲಿ ಸರಿಸುಮಾರು 50-150 ಪಕ್ಷಿಗಳವರೆಗೂ ಗುರುತಿಸಬಹುದು. ಸಂತಾನೋತ್ಪತ್ತಿಯು ಮಾರ್ಚ್ ನಿಂದ ಜೂನ್ ವರೆಗೆ ಇರುತ್ತದೆ. ಮಣ್ಣಿನ ಗೋಡೆಗಳಲ್ಲಿ ನಾಲ್ಕರಿಂದ ಐದು ಅಡಿಯಷ್ಟು ಉದ್ದದ ಸುರಂಗವನ್ನು ಮಾಡಿ ಬರಿ ನೆಲದ ಮೇಲೆ 3-5 ಗೋಳಾಕಾರದ ಮೊಟ್ಟೆಗಳನ್ನಿಟ್ಟು 14 ದಿನಗಳ ಕಾಲ ಕಾವುಕೊಡುತ್ತವೆ. ಮರಿಗಳು ನಾಲ್ಕು ವಾರಗಳಲ್ಲಿ ಹಾರುವ ಸಾಮರ್ಥ್ಯವನ್ನು ಹೊಂದುತ್ತವೆ.



**ಕಪ್ಪು ಬಿಳಿ ಮಿಂಚುಳ್ಳಿ** **© ಪೃಥ್ವಿ ಬಿ.**

ಕಪ್ಪು ಬಿಳಿ ಮಿಂಚುಳ್ಳಿ (ಪೈಡ್ ಕಿಂಗ್‌ಫಿಶರ್) ಆಫ್ರಿಕಾ ಮತ್ತು ಏಷ್ಯದಾದ್ಯಂತ ವ್ಯಾಪಕವಾಗಿ ವಿಸ್ತರಿಸಲ್ಪಟ್ಟಿದೆ. ನೀರಿನ ಮಟ್ಟದಲ್ಲಿ ಹಾರಾಡುತ್ತ ಕ್ಷಣಾರ್ಧದಲ್ಲೇ ನೀರಿಗೆ ಧುಮುಕಿ ಮೀನನ್ನು ಹಿಡಿಯಬಲ್ಲದ್ದಾಗಿದೆ. ಗಂಟೆಗೆ ಸುಮಾರು ಐವತ್ತು ಕಿ.ಮೀ ವೇಗವಾಗಿ ಹಾರಾಡುತ್ತ ನದಿ, ಸರೋವರ, ದೊಡ್ಡ ದೊಡ್ಡ ಕೆರೆಗಳ ಬಳಿ ಕಾಣಸಿಗುತ್ತವೆ. ಗಾಳಿಯಲ್ಲಿ ಒಂದೇ ಜಾಗದಲ್ಲಿ ಹಾರಾಡುತ್ತಾ ಸುಮಾರು ಸಮಯದವರೆಗೆ ನಿಲ್ಲುವ ಸಾಮರ್ಥ್ಯ ಹೊಂದಿದ್ದು, ಅಲ್ಲಿಂದಲೇ ನೀರಿಗೆ ಜಿಗಿಯುತ್ತದೆ. ಸುಮಾರು ಇಪ್ಪತ್ತೈದು ಸೆಂ.ಮೀ ಉದ್ದವಿದ್ದು, ಕಪ್ಪು ಮುಖವಾಡದೊಂದಿಗೆ ದೇಹವೆಲ್ಲಾ ಕಪ್ಪು ಬಿಳಿ ಗುರುತುಗಳನ್ನೊಳಗೊಂಡಿದೆ. ಇವುಗಳ ಮುಖ್ಯ ಆಹಾರ ಮೀನುಗಳಾಗಿದ್ದರೂ ಆಗಾಗ ಕೊಡತಿ ಹುಳ, ಏಡಿ ಮತ್ತು ನೀರಿನ ಬಳಿ ಸುಳಿದಾಡುವಂತಹ ಮಿಡತೆಗಳನ್ನು ಸಹ ಹಿಡಿಯುತ್ತವೆ. ತಾನು ಹಿಡಿದ ಬೇಟೆಯು ಸಣ್ಣದಾಗಿದ್ದಲ್ಲಿ ಹಾರುತ್ತಲೇ ಅದನ್ನು ನುಂಗುತ್ತದೆ. ಇವುಗಳ ಸಂತಾನೋತ್ಪತ್ತಿ ಸಮಯವು ಫೆಬ್ರವರಿ ಇಂದ ಏಪ್ರಿಲ್ ವರೆಗೆ. ನೀರಿನಿಂದ ಸುಮಾರು ಐದು ಅಡಿ ಎತ್ತರದಲ್ಲಿ ಮಣ್ಣಿನ ಗೋಡೆಯಲ್ಲಿ ಸುರಂಗದಂತಹ ಗೂಡನ್ನು ಮಾಡುತ್ತವೆ. ಹಲವಾರು ಮಿಂಚುಳ್ಳಿಗಳ ಗೂಡುಗಳು ಅಕ್ಕ ಪಕ್ಕದಲ್ಲಿಯೇ ಇರುತ್ತವೆ. ಸಾಮಾನ್ಯವಾಗಿ ನಾಲ್ಕರಿಂದ ಆರು ಬಿಳಿ ಮೊಟ್ಟೆಗಳನ್ನಿಟ್ಟು ಗಂಡು ಮತ್ತು ಹೆಣ್ಣು ಎರಡು ಕೂಡ ಕಾವು ಕೊಟ್ಟು ಮರಿಮಾಡುತ್ತವೆ.



**ಶಿಕ್ರಾ** © ಪೃಥ್ವಿ ಬಿ.

ಶಿಕ್ರಾ ಎಸಿಪಿಟ್ರಿಡೇ ಕುಟುಂಬಕ್ಕೆ ಸೇರಿರುವ ಬೇಟೆಯಾಡುವ ಒಂದು ಸಣ್ಣ ಹಕ್ಕಿಯಾಗಿದೆ. ಹೆಚ್ಚಾಗಿ ಆಫ್ರಿಕಾ ಮತ್ತು ಏಷ್ಯ ಖಂಡಗಳಲ್ಲಿ ವ್ಯಾಪಕವಾಗಿ ಕಾಣಸಿಗುತ್ತವೆ. ಇದನ್ನು ಪುಟ್ಟ ಬ್ಯಾಂಡೆಡ್ ಗೋಶಾಕ್ ಎಂದೂ ಕೂಡ ಕರೆಯುತ್ತಾರೆ. ಇದರ ಕರೆಯನ್ನು ಕಾಜಾಣಗಳು ಮತ್ತು ಕೋಗಿಲೆಚಾಣಗಳು ಅನುಕರಿಸುತ್ತವೆ. ಕಾಡು, ಕೃಷಿ ಭೂಮಿ ಹಾಗು ನಗರಗಳಲ್ಲಿ ಗಾಳಿಯಲ್ಲಿ ತೇಲುತ್ತಿರುವುದು ಕಾಣುತ್ತದೆ. ಆಹಾರವನ್ನಾಗಿ ಅಳಿಲುಗಳನ್ನು, ಸರೀಸೃಪ, ಕೀಟ ಹಾಗು ಸಣ್ಣ ಪಕ್ಷಿಗಳನ್ನು ಸಹ ಬೇಟೆಯಾಡುತ್ತವೆ. ಸಣ್ಣ ಪಕ್ಷಿಗಳು ಇದರಿಂದ ತಪ್ಪಿಸಿಕೊಳ್ಳಲು ಎಲೆಗಳ ಕೆಳಗೆ ಮರೆಯಾದರೆ ಸಣ್ಣ ನೀಲಿ ಮಿಂಚುಳ್ಳಿಯು ನೀರಿನಲ್ಲಿ ಮುಳುಗುತ್ತವೆ. ಇವು ಸಣ್ಣ ಬಾವಲಿಗಳಿಗಾಗಿ ಮುಸ್ಸಂಜೆಯಲ್ಲಿ ಬೇಟೆಯಾಡುವುದೂ ಸಹ ಕಂಡುಬರುತ್ತದೆ. ಭಾರತದಲ್ಲಿ ಇದರ ಸಂತಾನೋತ್ಪತ್ತಿ ಸಮಯವು ಮಾರ್ಚ್ ನಿಂದ ಜೂನ್ ವರೆಗಿರುತ್ತದೆ. ಕಾಗೆಗಳಂತೆಯೇ ಗೂಡನ್ನು ಹುಲ್ಲಿನಿಂದ ಮುಚ್ಚಿರುತ್ತದೆ. ತಿಳಿ ನೀಲಿ ಬಣ್ಣದ ಮೂರ್ನಾಲ್ಕು ಮೊಟ್ಟೆಗಳನ್ನಿಟ್ಟು 18-21 ದಿನಗಳಕಾಲ ಕಾವು ಕೊಡುತ್ತವೆ. ಶಿಕ್ರಾ ಎಂಬ ಪದವು ಹಿಂದಿ ಭಾಷೆಯಲ್ಲಿ ಬೇಟೆಗಾರ ಎಂದು ಅರ್ಥ.

**ಛಾಯಾಚಿತ್ರ:** ಪೃಥ್ವಿ ಬಿ.
**ಲೇಖನ:** ಧನರಾಜ್ ಎಂ.

# ನೀವೂ ಕಾನನಕ್ಕೆ ಬರೆಯಬಹುದು



© WWF Engro Green Office Team

ಸಕಲ ಜೀವರಾಶಿಗಳಿಗೂ ಇರುವುದೊಂದೇ ಭೂಮಿ. ಹಾಗೆಯೇ ಹಂಚಿಕೊಳ್ಳುವ ಬಾನು ಸಹ ಒಂದೇ. ಭೂಮಿ-ಬಾನು ಗಳ ನಡುವೆ ಇರುವ ಜೀವರಾಶಿಗಳು ಒಂದಕ್ಕೊಂದು ಕೊಂಡಿಗಳಂತೆ ಬೆಸೆದುಕೊಂಡಿವೆ. ಬಿಸಿಲು, ಮಳೆ, ಚಳಿ, ಗಾಳಿಗಳಿಗೆ ರಕ್ಷಣೆ ಪಡೆಯಲು ಪ್ರತೀ ಜೀವಿಯೂ ತನ್ನದೇ ಆದ ಕಲೆಯನ್ನು ಕರಗತ ಮಾಡಿಕೊಂಡಿದೆ. ಇಡೀ ಜಗತ್ತಿಗೆ ಶಕ್ತಿಯ ಮೂಲವಾದ ಸೂರ್ಯನು ಅಪರಿಮಿತವಾದ ಶಕ್ತಿಯನ್ನು ಅಡಗಿಸಿಕೊಂಡು, ಕೊಡುವ ಬೆಳಕಲ್ಲೇ ಚೈತನ್ಯ ಪಡೆದು ಬದುಕುವ ಜೀವಿಗಳಿಗೆ ಅವನಿಂದ ಹೊರಹೊಮ್ಮುವ ನೇರಳಾತೀತ ಕಿರಣಗಳು ಅಪಾಯವನ್ನುಂಟು ಮಾಡುವ ಶಕ್ತಿಯುಳ್ಳವಾಗಿವೆ. ಮೇಲ್ಮಟ್ಟದ ವಾತಾವರಣದಲ್ಲಿರುವ ಓಝೋನ್ ($O_3$) ಪದರವು ಸೂರ್ಯನಿಂದ ಹೊರಹೊಮ್ಮುವ ನೇರಳಾತೀತ ಕಿರಣಗಳು ಭೂಮಿಯ ಮೇಲ್ಮೈ ತಲುಪುವುದನ್ನು ತಡೆದು ಜೀವಿಗಳ ರಕ್ಷಣಾ ಕವಚದಂತೆ ಕೆಲಸ ಮಾಡುತ್ತಿದೆ. ಆದರೆ 1970 ರಲ್ಲಿ ವಿಜ್ಞಾನಿಗಳು ಸಂಶೋಧನೆಗಳ ಮೂಲಕ ಓಝೋನ್ ಪದರವು ಕ್ಷೀಣಿಸುತ್ತಿದೆ ಎಂಬ ಆಘಾತಕಾರಿ ವಿಚಾರವನ್ನು ತಿಳಿಸಿದ್ದಾರೆ.

ಓಝೋನ್ ಪದರ ಕ್ಷೀಣಿಸುವುದು ಒಂದು ಸ್ವಾಭಾವಿಕ ಕ್ರಿಯೆಯಾಗಿದ್ದರೂ, ಮಾನವನ ಕೊಡುಗೆ ಅಪಾರವಾಗಿದೆ. ಹಸಿರುಮನೆ ಪರಿಣಾಮಕ್ಕೆ ಕಾರಣವಾಗುವ ಅನಿಲಗಳು, ಶುಚಿ ಕಾರಕಗಳು, ಕೀಟನಾಶಕಗಳು ಹೀಗೆ ಅನೇಕ ರೀತಿಯ ಮಲಿನಕಾರಕಗಳ ಬಳಕೆಯಿಂದ ಓಝೋನ್ ಪದರ ಕ್ಷೀಣಿಸುತ್ತಿದ್ದು ಚರ್ಮರೋಗಗಳು, ಜಲಚರಗಳಿಗೆ ಅಪಾಯ, ಸಸ್ಯಗಳ ಬೆಳವಣಿಗೆ ಕುಂಠಿತವಾಗುವ ಸಾಧ್ಯತೆ ಹೆಚ್ಚಿದೆ. ಇವೆಲ್ಲವನ್ನು ಅರಿತು ಪರಿಸರಸ್ನೇಹಿ ಅಭ್ಯಾಸಗಳನ್ನು ರೂಢಿ ಮಾಡಿಕೊಳ್ಳಲು, ಜನರಲ್ಲಿ ಜಾಗೃತಿ ಮೂಡಿಸಲು ಸೆಪ್ಟೆಂಬರ್ 16 ಅಂತರರಾಷ್ಟ್ರೀಯ ಓಝೋನ್ ಪದರ ಸಂರಕ್ಷಣಾ ದಿನವನ್ನಾಗಿ ಆಚರಿಸಲಾಗುತ್ತದೆ..

ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಪ್ರತಿಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

**ಕಾನನ ಪತ್ರಿಕೆಯ ಇ-ಮೇಲ್ ವಿಳಾಸ**: kaanana.mag@gmail.com

**ಅಂಚೆ ವಿಳಾಸ:**

Study House,

ಕಾಳೇಶ್ವರಿ ಗ್ರಾಮ,

ಆನೇಕಲ್ ತಾಲ್ಲೂಕು,

ಬೆಂಗಳೂರು ನಗರ ಜಿಲ್ಲೆ,

ಪಿನ್ ಕೋಡ್ :560083. ಗೆ ಕಳಿಸಿಕೊಡಬಹುದು.